ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ ಕಾರ್ಯಾಲಯ, ಬೆಳಗಾವಿ-590-002
ZILLA PANCHAYAT OFFICE, BELGAUM-590002

ದೂರವಾಣಿ Telephone: 0831-2407201, 0831-2407206, 0831-2407213
ಫ್ಯಾಕ್ಸ್/Fax: 0831-2429662
e-mail: ceozpbelgaum@yahoo.com

ವಿಷಯ: ಸನ್-2012-13ನೇ ಸಾಲಿಗೆ 13ನೇ ಹಣಕಾಸು ಆಯೋಗದ ಸಾಮಾನ್ಯ ಮೂಲ ಅನುದಾನ ಬಿಡುಗಡೆ ಮಾಡುವ ಕುರಿತು.

ಓದಲಾಗಿದೆ:
1) ಸರ್ಕಾರದ ಆದೇಶ ಸಂ:ಗ್ರಾಅಪ/60/ಗ್ರಾಪಸ/2012 ದಿ: 15-03-2013.
2) ಸರ್ಕಾರದ ಆದೇಶ ಸಂ:ಗ್ರಾಅಪ/49/ಗ್ರಾಪಸ/2013 ದಿ: 19-07-2013.
3) ಸರ್ಕಾರದ ಆದೇಶ ಸಂ:ಗ್ರಾಅಪ/21/ಗ್ರಾಪಸ/2013 ದಿ: 27-06-2013
4) ಜಿಲ್ಲಾ ಪಂಚಾಯತ ಸಾಮಾನ್ಯ ಸಭೆ ದಿನಾಂಕ: 25-09-2013.

## ಪ್ರಸ್ತಾವನೆ:

ಕೇಂದ್ರ ಸರ್ಕಾರದಿಂದ 13 ನೇ ಹಣಕಾಸು ಆಯೋಗದಡಿ ಓದಲಾದ (1) ಮತ್ತು (2),ರ ಆದೇಶದಲ್ಲಿ ಸನ್-2012-13 ನೇ ಸಾಲಿನ ಎರಡನೇ ಹಾಗೂ ಸನ್-2013-14 ನೇ ಸಾಲಿನ ಮೊದಲನೇ ಕಂತಿನ ಸಾಮಾನ್ಯ ಮೂಲ ಅನುದಾನವನ್ನು ಜಿಲ್ಲಾ , ತಾಲೂಕು, ಮತ್ತು ಗ್ರಾಮ ಪಂಚಾಯತಿಗಳಿಗೆ 10:20:70 ರ ಅನುಪಾತದಲ್ಲಿ ನೇರವಾಗಿ ಸಂಬಂಧಿಸಿದ ಬ್ಯಾಂಕ ಖಾತೆಗಳಿಗೆ ಸರ್ಕಾರವು ಬಿಡುಗಡೆ ಮಾಡಿರುತ್ತದೆ. ಈ ಅನುದಾನವನ್ನು ಲೆಕ್ಕ ಶೀರ್ಷಿಕೆ -2515-00-196-6-09, 2515-00-197-6-09 ಮತ್ತು 2515-00-198-6-09 (ಯೋಜನೇತರ) ಶಿರ್ಷಿಕೆಯಡಿ ಪಾವತಿಸಲು ಸರ್ಕಾರದ ಆದೇಶದಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ. ಅದರಂತೆ ಸದರಿ ಯೋಜನೆಯಡಿಯಲ್ಲಿ ಬಿಡುಗಡೆಯಾಗಿರುವ 2ನೇ ಕಂತು ರೂ. 171,80,022/- ಹಾಗೂ 1ನೇ ಕಂತು ರೂ. 193,17,549/- ಲಕ್ಷ ಅನುದಾನ ಬಿಡುಗಡೆಯಾಗಿರುತ್ತದೆ. ಒಟ್ಟು ರೂ. 364,97,571 ಅನುದಾನವನ್ನು ಸರ್ಕಾರವು ಬಿಡುಗಡೆ ಮಾಡಿರುತ್ತದೆ. ಓದಲಾದ(3) ಆದೇಶದಲ್ಲಿ ಮಾರ್ಗಸೂಚಿಗಳನ್ನು ಸರ್ಕಾರವು ಪರಿಷ್ಕೃತವಾಗಿ ಘೋಷಣೆ ಮಾಡಿದ್ದು, ಸದರಿ ಮಾರ್ಗಸೂಚಿಗಳ ಪ್ರಕಾರ ಸರ್ಕಾರವು ನಿರ್ದಿಷ್ಟಪಡಿಸಿದ ಕಾಮಗಾರಿಗಳನ್ನು ಕೈಕೊಳ್ಳಬೇಕಾಗುತ್ತದೆ. ಶೇಕಡಾ. 3 ರಷ್ಟು ಅಂಗವಿಕಲರ ಕಲ್ಯಾಣಕ್ಕಾಗಿ ಕ್ರಿಯಾ ಯೋಜನೆ ತಯಾರಿಸುವಾಗ ಅಂಗವಿಕಲರ ಕಲ್ಯಾಣ ಕಾರ್ಯಕ್ರಮಕ್ಕಾಗಿ ಕಲ್ಪಿಸಬೇಕಾಗುತ್ತದೆ.

ಓದಲಾದ (4)ರ ಜಿಲ್ಲಾ ಪಂಚಾಯತ ಸಾಮಾನ್ಯ ಸಭೆಯಲ್ಲಿ ಕ್ರಿಯಾ ಯೋಜನೆಗೆ ಅನುಮೋದನೆ ದೊರೆತ್ತಿದ್ದು, ಸಾಮಾನ್ಯ ಮೂಲ ಅನುದಾನ ಕ್ರಿಯಾ ಯೋಜನೆಯಲ್ಲಿ ಜಿಲ್ಲಾ ಪಂಚಾಯತವು ಕಾರ್ಯಕಾರಿ ಅಭಿಯಂತರರು, ಪಂ.ರಾ.ಇಂ. ವಿಭಾಗ ಬೆಳಗಾವಿ ಇವರಿಗೆ 54 ಕಾಮಗಾರಿಗಳಿಗೆ ರೂ. 160.06 ಲಕ್ಷಗಳ ಕಾಮಗಾರಿಗಳಿಗೆ ಅನುಮೋದನೆ ನೀಡಲಾಗಿದೆ, ಅದರಂತೆ ಕಾರ್ಯಕಾರಿ ಅಭಿಯಂತರರು, ಪಂ.ರಾ.ಇಂ. ವಿಭಾಗ ಚಿಕ್ಕೋಡಿ ಇವರಿಗೆ 72 ಕಾಮಗಾರಿಗಳನೊಳಗೊಂಡು ರೂ. 175.84 ಲಕ್ಷ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಗಿದೆ. ಒಟ್ಟಾರೆ ಸಾಮಾನ್ಯ ಮೂಲ ಅನುದಾನದಲ್ಲಿ ಎರಡು ವಿಭಾಗ ಸೇರಿ ಒಟ್ಟು 335.90 ಲಕ್ಷ ಅನುದಾನಕ್ಕೆ 126 ಕಾಮಗಾರಿಗಳಿಗೆ ಅನುಮೋದನೆ ನೀಡಲಾಗಿದೆ. ಸದರಿ ಮೊತ್ತವನ್ನು ಎರಡು ವಿಭಾಗಗಳಿಗೆ ಬಿಡುಗಡೆ ಮಾಡುವುದಕ್ಕಾಗಿ ಈ ಆದೇಶ

20/12/13
20 DEC 2013
20/12
20/12/13

(ರೂ.ಲಕ್ಷಗಳಲ್ಲಿ)

| ಅ.ನಂ | ಸರ್ಕಾರದ ಆದೇಶ ಸಂ | ಬಿಡುಗಡೆ ಮಾಡಿದ ಕಂತುಗಳು | ಕ್ರಿಯಾ ಯೋಜನೆ ಅನುಮೋದನೆ ನೀಡಿದ ಪ್ರಕಾರ ಬಿಡುಗಡೆ ಮಾಡಿದ ಮೊತ್ತ | ಒಟ್ಟು ಕಾಮಗಾರಿಗಳು |
|---|---|---|---|---|
| 1 | 2 | 3 | 4 | 5 |
| 1 | ಸರ್ಕಾರದ ಆದೇಶ ಸಂ: ಗ್ರಾಅಪ/60/ಗ್ರಾಪಸ /2012 ದಿ: 15-03-2013 (2012-13 ನೇ ಸಾಲಿನ ಸಾಮಾನ್ಯ ಮೂಲದ ಎರಡನೇ ಕಂತು) | 171,80,022 | 335.90 | 126 |
| 2 | ಸರ್ಕಾರದ ಆದೇಶ ಸಂ: ಗ್ರಾಅಪ/49/ ಗ್ರಾಪಸ/2013 ದಿ: 19-07-2013 (2013-14 ನೇ ಸಾಲಿನ ಮೊದನೇ ಕಂತು) | 193,17,549 | | |

ಕ್ರಸಂ:ಜಿಪ/ಅಭಿವೃದ್ಧಿ/13ನೇಹ/ವಿವ-24/13-14

ದಿನಾಂಕ: 19-12-2013

## ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ 13ನೇ ಹಣಕಾಸು ಆಯೋಗದ ಸಾಮಾನ್ಯ ಮೂಲ ಸನ್-2012-13ನೇ ಸಾಲಿನ ಎರಡನೇ ಕಂತಿನ ಅನುದಾನ ಹಾಗೂ ಸನ್-2013-14 ನೇ ಸಾಲಿನ ಮೊದಲನೇ ಕಂತಿನ ಅನುದಾನ ಒಟ್ಟು ರೂ. 335.90 ಲಕ್ಷ ಅನುದಾನಕ್ಕೆ ಜಿಲ್ಲಾ ಪಂಚಾಯತ ಸಾಮಾನ್ಯ ಸಭೆಯು ಕ್ರಿಯಾ ಯೋಜನೆಗೆ ಅನುಮೋದನೆ ನೀಡಿರುವುದರಿಂದ ಇದರಲ್ಲಿ ಕಾರ್ಯಕಾರಿ ಅಭಿಯಂತರರು, ಪಂ.ರಾ.ಇಂ. ವಿಭಾಗ ಬೆಳಗಾವಿ ಇವರಿಗೆ 54 ಕಾಮಗಾರಿಗಳ ಅನುಷ್ಠಾನಗೊಳಿಸಲು ರೂ. 160.06 ಲಕ್ಷ ಅನುದಾನ ಹಾಗೂ ಕಾರ್ಯಕಾರಿ ಅಭಿಯಂತರರು, ಪಂ.ರಾ.ಇಂ. ವಿಭಾಗ ಚಿಕ್ಕೋಡಿ ಇವರಿಗೆ 72 ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ರೂ. 175.84 ಲಕ್ಷ ಒಟ್ಟು ಎರಡು ವಿಭಾಗ ಸೇರಿ ರೂ. 335.90 ಲಕ್ಷ ಅನುದಾನಕ್ಕೆ 126 ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ ಬೆಳಗಾವಿ ಇವರಿಗೆ ಎರಡು ವಿಭಾಗದವರಿಗೆ ಅನುಮೊದನೆಗೊಂಡ ಕ್ರಿಯಾ ಯೋಜನೆ ಪ್ರಕಾರ ಬಿಡುಗಡೆಗೊಳಿಸಲು ಆದೇಶಿಸಿದೆ.

(ರೂ.ಲಕ್ಷಗಳಲ್ಲಿ)

| ಅನಂ | ಅನುಷ್ಠಾನಾಧಿಕಾರಿಗಳು | ಸನ್-12-13 ನೇ ಹಾಗೂ 13-14 ನೇ ಸಾಲಿನ ಅನುದಾನ ಬಿಡುಗಡೆ | ಒಟ್ಟು ಕಾಮಗಾರಿಗಳು |
|---|---|---|---|
| 1 | 2 | 3 | 4 |
| 1 | ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ. ವಿಭಾಗ ಬೆಳಗಾವಿ | 160.06 | 54 |
| 2 | ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ. ವಿಭಾಗ ಚಿಕ್ಕೋಡಿ | 175.84 | 72 |
| | **ಒಟ್ಟು** | **335.90** | **126** |

ಮೇಲೆ ಸೂಚಿಸಿದ ಮೊತ್ತವನ್ನು ಅನುಷ್ಠಾನ ಅಧಿಕಾರಿಗಳು ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟು ಅನುಷ್ಠಾನಗೊಳಿಸಲು ಆದೇಶಿಸಿದೆ.

**ನಿಬಂಧನೆಗಳು:**

1) ಸರ್ಕಾರದ ಆದೇಶ ಸಂ: ಗ್ರಾಅಪ:21:ಗ್ರಾಪಸ:2013 ದಿ:27-06-2013 ರಲ್ಲಿ ಸೂಚಿಸಿರುವ ಮಾರ್ಗಸೂಚಿಗಳ ಪ್ರಕಾರ ಸದರಿ ಯೋಜನೆಯನ್ನು ಅನುಷ್ಠಾನಗೊಳಿಸತಕ್ಕದ್ದು.
2) ಈ ಅನುದಾನವನ್ನು ಕ್ರಿಯಾ ಯೋಜನೆಯಲ್ಲಿ ಅನುಮೋದನೆಯಾದ 13ನೇ ಹಣಕಾಸು ಆಯೋಗದ ಕಾಮಗಾರಿ ಹೊರತು ಬೇರೆ ಯಾವುದೇ ಕಾಮಗಾರಿಗಳಿಗೆ ಉಪಯೋಗಿಸಿತಕ್ಕದ್ದಲ್ಲ.
3) ಬಳಕೆಯಾದ ಹಣ ಹಾಗೂ ಕಾಮಗಾರಿ ಪ್ರಗತಿಯನ್ನು ವೆಬ್‌ಸೈಟನಲ್ಲಿ ಹಾಗೂ ಆನ್‌ಲೈನ್ ಸೌಲಭ್ಯದಲ್ಲಿ ಅಳವಡಿಸಲಾಗಿರುವ ನಮೂನೆಯಲ್ಲಿ ಪ್ರತಿ ತಿಂಗಳು 3ನೇ ತಾರೀಖಿನೊಳಗೆ ಪ್ರಗತಿ ನೀಡತಕ್ಕದ್ದು.
4) 13ನೇ ಹಣಕಾಸು ಆಯೋಗದ ವಿವಿಧ ಯೋಜನೆಗಳ ಕಾಮಗಾರಿಗಳನ್ನು ಜಿಲ್ಲಾ ಪಂಚಾಯತಿಯಿಂದ ಆಡಳಿತಾತ್ಮಕ ಅನುಮೋದನೆ ಪಡೆಯತಕ್ಕದ್ದು.
5) 13ನೇ ಹಣಕಾಸು ಆಯೋಗದ ಸಾಮಾನ್ಯ ನಿರ್ವಹಣೆ ಹಾಗೂ ಸಾಮಾನ್ಯ ಮೂಲ ಅನುದಾನದಡಿ ಕಾಮಗಾರಿಗಳಿಗಾಗಿ ಬಿಡುಗಡೆಯಾದ ಅನುದಾನಕ್ಕೆ ಪ್ರತಿ ತ್ರೈಮಾಸಿಕ ಅವಧಿಗೆ ಅಂತ್ಯಗೊಂಡಂತೆ ಆರ್ಥಿಕ ಮತ್ತು ಭೌತಿಕ ಪ್ರಗತಿಯೊಂದಿಗೆ ಹಣ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.
6) ಕಾಮಗಾರಿ ಅನುಷ್ಠಾನದಲ್ಲಿ ಸರ್ಕಾರದ ಮಾರ್ಗಸೂಚಿಯನ್ವಯ ಕಾಮಗಾರಿಗಳನ್ನು ಕೈಗೊಳ್ಳತಕ್ಕದ್ದು. ಹಾಗೂ ಸರ್ಕಾರದಿಂದ, ಮತ್ತು ಜಿಲ್ಲಾ ಪಂಚಾಯತಿಯಿಂದ ಕಾಲಕಾಲಕ್ಕೆ ನೀಡಲಾದ, ಮಾರ್ಗಸೂಚಿ, ಸುತ್ತೋಲೆ, ಹಾಗೂ ಆದೇಶಗಳನ್ನು ಪಾಲಿಸತಕ್ಕದ್ದು.
7) ಕಾಮಗಾರಿ ಅನುಷ್ಠಾನದಲ್ಲಿ 3 ಹಂತದ ಛಾಯಾ ಚಿತ್ರಗಳನ್ನು ತೆಗೆದು ಕಡತದಲ್ಲಿ ನಿರ್ವಹಿಸತಕ್ಕದ್ದು. ಹಾಗೂ ಮೇಲಾಧಿಕಾರಿಗಳ ಭೇಟಿ ಸಮಯದಲ್ಲಿ ಅವರ ಗಮನಕ್ಕೆ ತರತಕ್ಕದ್ದು.
8) ಬಿಡುಗಡೆಯಾದ ಹಾಗೂ ಲಭ್ಯವಿದ್ದ ಅನುದಾನಕ್ಕೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳತಕ್ಕದ್ದು.
9) ಸಾರ್ವಜನಿಕ ಪಾರದರ್ಶಕ ನಿಯಮಗಳನ್ನು ಪಾಲಿಸತಕ್ಕದ್ದು.
10) ಕಾಮಗಾರಿಗಳು ಮುಕ್ತಾಯವಾದ ನಂತರ ಸಂಬಂಧಿಸಿದ ಗ್ರಾಮ ಪಂಚಾಯತಿಯಿಂದ ಮುಕ್ತಾಯವಾದ ಬಗ್ಗೆ ಧೃಡಿಕರಣ ಪತ್ರವನ್ನು ಈ ಕಾರ್ಯಾಲಯಕ್ಕೆ ಸಲ್ಲಿಸತಕ್ಕದ್ದು.

(ದೀಪ ಚೋಳನ)
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ ಬೆಳಗಾವಿ

**ಪ್ರತಿಯನ್ನು: ಗೌರವಗಳೊಂದಿಗೆ ಸಲ್ಲಿಸಿದೆ.**

1) ಸರ್ಕಾರದ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆ, ಬೆಂಗಳೂರು.
2) ಅಧ್ಯಕ್ಷರು, ಜಿಲ್ಲಾ ಪಂಚಾಯತ ಬೆಳಗಾವಿ.
3) ಉಪಾಧ್ಯಕ್ಷರು, ಜಿಲ್ಲಾ ಪಂಚಾಯತ ಬೆಳಗಾವಿ.

**ಪ್ರತಿಯನ್ನು ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ:**

1) ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ ಬೆಳಗಾವಿ.
2) ಮುಖ್ಯ ಯೋಜನಾಧಿಕಾರಿಗಳು, ಜಿಲ್ಲಾ ಪಂಚಾಯತ ಬೆಳಗಾವಿ
3) ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ. ವಿಭಾಗ ಬೆಳಗಾವಿ/ಚಿಕ್ಕೋಡಿ.
4) ಜಿಲ್ಲೆಯ ಎಲ್ಲ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲೂಕ ಪಂಚಾಯತ ___________.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ ಬೆಳಗಾವಿ